ISSN: 2347-2723 IMPACT FACTOR : 2.0260(UIF) VOLUME - 4 | ISSUE - 10 | MAY - 2017

REVIEW OF LITERATURE

# ಡಾ॥ ವ್ಹಿ.ಜಿ. ಪೂಜಾರರ ಭಾಷಾ ವಿವೇಚನೆ ಒಂದು ಮರುಚಿಂತನೆ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ**

ಪ್ರಪಂಚದಲ್ಲಿ ಮನುಷ್ಯನು ಮಾತ್ರ ಅತ್ಯದ್ಭುತವಾಗಿ ಬಳಸಿಕೊಳ್ಳುತ್ತಿರುವ ಸಂವಹನ ಕಲೆಗಳಲ್ಲಿ ಭಾಷೆ ಒಂದು. ಭಾಷೆ ಅಪಾರ ಜ್ಞಾನಾರ್ಜನೆಯ ಮೂಲವಾಗಿದೆ. ಮನುಷ್ಯನು ತನ್ನ ಭಾವನೆಗಳು ಅಭಿವ್ಯಕ್ತಪಡಿಸುವ ಪ್ರಮುಖ ಮಾಧ್ಯಮವೇ ಭಾಷೆ. ಭಾಷಾ ವಿಜ್ಞಾನ ಅಧ್ಯಯನದ ಕ್ಷೇತ್ರವು ಹತ್ತು ಹಲವು ಆಯಾಮಗಳಲ್ಲಿ ಬೆಳೆದು ನಿಂತಿದೆ. ಅಂತಹ ಅಂತಾರಾಷ್ಟ್ರೀಯ ಮಟ್ಟದಲ್ಲಿ ಜ್ಞಾನಕ್ಷೇತ್ರದಲ್ಲಿ ಬೆಳೆಯುವುದು ಅಷ್ಟೊಂದು ಸುಲಭ ಕಾರ್ಯವಲ್ಲ. ಆದರೂ ಈ ಕ್ಷೇತ್ರದ ವಿದ್ವಾಂಸರ ಸಂಖ್ಯೆಯೂ ವಿರಳಾತಿ ವಿರಳ.

ಕನ್ನಡ ಭಾಷಾವಿಜ್ಞಾನ ಕ್ಷೇತ್ರ ಇಂದು ಸಾಕಷ್ಟು ಬೆಳವಣಿಗೆ ಹೊಂದುತ್ತಿರುವ ಈ ಕಾಲದಲ್ಲಿ ಅದರ ಬೆಳವಣಿಗೆಗೆ ಬೆರಳೆಣಿಕೆಯಷ್ಟೇ ಭಾಷಾ ವಿಜ್ಞಾನಿಗಳು ಶ್ರಮಿಸಿದ್ದಾರೆ. ಅಂತಹ ಮಹತ್ವದ ವಿದ್ವಾಂಸರಲ್ಲಿ ಡಾ॥ ವ್ಹಿ.ಜಿ. ಪೂಜಾರ ಅವರು ಒಬ್ಬರು. ಇವರು ಸದಾ ಪರಿಶ್ರಮ ಮತ್ತು ಪ್ರಾಮಾಣಿಕತೆಗೆ ಹೆಸರಾಗಿದ್ದಾರೆ. ಶಿಸ್ತು, ಸಂಯಮ, ಸರಳತೆ, ಸೌಜನ್ಯತೆ, ಸಮಯಪ್ರಜ್ಞೆ, ಶ್ರದ್ಧೆ ಹಾಗೂ ಶುದ್ಧ ಮನಸ್ಸಿನಿಂದ ಅಪಾರ ವಿದ್ಯಾರ್ಥಿಗಳ, ಸಹೋದ್ಯೋಗಿಗಳ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ.

ವಿಷಯದ ವಿವರಣೆಯನ್ನು ನೀಡುವಾಗ ಸುಲಭವಾಗಿ ಅರ್ಥವಾಗುವಂತೆ ಉದಾಹರಣೆ ಮತ್ತು ನೇರ ವಿಧಾನವನ್ನು ಆಕರ್ಷಕ ಶೈಲಿಯನ್ನು ಬಳಸುತ್ತಾರೆ. ವಿವರಿಸುವ ಸಂದರ್ಭದಲ್ಲಿ ಎಲ್ಲಿಂದಾದರೂ ಯಾವ ವಿಷಯವನ್ನು ತೆಗೆದುಕೊಂಡರೂ ಅದನ್ನು ತಪ್ಪದೇ ಅವರು ಪ್ರಾಮಾಣಿಕವಾಗಿ ನಮೂದಿಸುತ್ತಾರೆ. ಹಾಗೆ ವಿಷಯದ ಆಳಕ್ಕೆ ಇಳಿಯುತ್ತ ವಿಷಯ ವಿವೇಚನೆಯನ್ನು ಮಾಡುತ್ತಾರೆ.

ಡಾ॥ ವ್ಹಿ.ಜಿ. ಪೂಜಾರ ಅವರು ಇದುವರೆಗೂ ಸುಮಾರು 52ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಭಾಷಾವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅತ್ಯಂತ ಮೌಲಿಕ ಕೃತಿಗಳಾಗಿವೆ. ಅಲ್ಲದೇ 72ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಸಂಶೋಧನೆ, ವಿಮರ್ಶೆ, ಸೃಜನ, ಜೀವನ ಚರಿತ್ರೆ, ಸಂಪಾದನೆ ಹಾಗೂ ಇತರ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿಮಾಡಿರುವ ಇವರು ಭಾಷಾವಿಜ್ಞಾನ ಕ್ಷೇತ್ರದಲ್ಲಿ ಹುಲುಸಾದ ಬೆಳೆ ಬೆಳೆದಿರುವರು ವಿಶೇಷ. ಬಹುಜನ ವಿದ್ವಾಂಸರಿಗೆ ಕಾರ್ಯಮಾಡಿ ಭಾಷಾವಿಜ್ಞಾನದ ಹೆದ್ದಾರಿಯಲ್ಲಿ ಇವರ ಒಂದೊಂದು ಕೃತಿಗಳು ಮೈಲುಗಲ್ಲುಗಳಂತೆ ಕಂಗೊಳಿಸುತ್ತಿವೆ.

ನಮ್ಮ ಸಾಂಪ್ರದಾಯಿಕ – ವ್ಯಾಕರಣ ವಿದ್ವಾಂಸರು, ಭಾಷಾಶಾಸ್ತ್ರವನ್ನು ತಿರಸ್ಕರಿಸಿ ಕೇವಲ ವ್ಯಾಕರಣವೊಂದನ್ನೇ ಹಿಡಿದು ಅದರ ಪರವಾಗಿಯೇ ವರ್ತಿಸುತ್ತಾ ಸಾಗುವುದು ಕಂಡು ಬರುತ್ತದೆ. ಕೆಲವು ವಿದ್ವಾಂಸರು ಮಾತ್ರ ಇವೆರಡರ ಹೊಂದಾಣಿಕೆಯನ್ನು ತಿಳಿಸುವರು. ಅಂತಹ ವಿರಳ ವಿದ್ವಾಂಸರಲ್ಲಿ ಡಾ॥ ವ್ಹಿ.ಜಿ. ಪೂಜಾರರೊಬ್ಬರು. ಅವರ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ "ಕನ್ನಡ ಭಾಷಾ ಸಮೀಕ್ಷೆ" "ಭಾಷಾವಿಜ್ಞಾನ ಸ್ವರೂಪ", "ಕನ್ನಡ ವ್ಯಾಕರಣ ಮತ್ತು ಭಾಷೆ" ಹಾಗೂ "ಕನ್ನಡ ಭಾಷಾ ವಿವೇಚನೆ" ಇವು ಮಹತ್ವದ ವಿಶಿಷ್ಟ ಕೃತಿಗಳಾಗಿವೆ. "ಭಾಷಾವಿಜ್ಞಾನ ಸ್ವರೂಪ" ಇವರ ಮಹತ್ವದ ಕೃತಿಯಾಗಿದೆ. ಈ ಕೃತಿಯಲ್ಲಿ ಭಾಷೆಯನ್ನು ಕುರಿತು ವಿಶ್ಲೇಷಣೆ ನಡೆಸುವ ಜ್ಞಾನ ಶಾಖೆ ಎಂದು ವ್ಯಾಖ್ಯಾನಿಸಿದ್ದಾರೆ. ನಂತರ ವರ್ಣನಾತ್ಮಕ ಭಾಷಾ ವಿಜ್ಞಾನ, ತೌಲನಿಕ ಭಾಷಾ ವಿಜ್ಞಾನ, ಐತಿಹಾಸಿಕ ಭಾಷಾ ವಿಜ್ಞಾನ ಮತ್ತು ಸಾಮಾಜಿಕ ಭಾಷಾ ವಿಜ್ಞಾನಗಳ ಸ್ವರೂಪವನ್ನು ವಿವರಿಸಿದ್ದಾರೆ.



ಈ ಕೃತಿಯು ಓದುಗರ ಹೃದಯವನ್ನು ಸ್ಪರ್ಶಿಸುವುದು. ಈ ಕೃತಿಯಲ್ಲಿನ ವಿವರಣೆಯು ಸ್ಪಷ್ಟವಾಗಿದ್ದು ಅವುಗಳ ಜೊತೆ ಉದಾಹರಣೆಗಳನ್ನು ನೀಡಿರುವುದಕ್ಕೆ ಸಂಪೂರ್ಣವಾಗಿ ಆ ವಿಷಯವೂ ನಮಗೆ ಸ್ಪಷ್ಟ ವಿಚಾರವನ್ನು ತಿಳಿಸುತ್ತದೆ. ಪಾಂಡಿತ್ಯಪೂರ್ಣ, ಸ್ಪಷ್ಟವೆನಿಸಬಹುದಾದ ಶಾಸ್ತ್ರೀಯ ವಿಷಯವನ್ನು ಹೀಗೆ ಅತ್ಯಂತ ಸರಳವಾಗಿ, ಚಿಕ್ಕ-ಚಿಕ್ಕ ವಾಕ್ಯಗಳಲ್ಲಿ ನಿರೂಪಿಸುವ ತಂತ್ರವನ್ನು ಕೃತಿಯು ಒಳಗೊಂಡಿದೆ.

ಈ ಕೃತಿಯು ಭಾಷೆ, ಭಾಷೆಯ ಉಗಮ ಸ್ವರೂಪ ವೈಶಿಷ್ಟ್ಯಗಳು, ವ್ಯಕ್ತಿಭಾಷೆ, ಪ್ರಭೇದ, ಉಪಭಾಷೆ, ಭಾಷೆ, ಕನ್ನಡ, ಪ್ರಾದೇಶಿಕ ಉಪಭಾಷೆಗಳು, ಧ್ವನಿ, ಧ್ವನಿಮಾ, ಆಕೃತಿಮಾ, ವಾಕ್ಯ-ವಾಕ್ಯ ಪ್ರಕಾರಗಳು ಇವೆಲ್ಲದರ ವಿವರಣೆಯನ್ನು ಒಳಗೊಂಡಿದೆ. ಇವೆಲ್ಲವನ್ನು ಗಮನಿಸಿದಾಗ ಭಾಷಾ ಶಾಸ್ತ್ರದ ಕೃತಿಯನ್ನು ಅತ್ಯಂತ ಸರಳವಾಗಿ ಹೇಗೆ ಬರೆಯಬೇಕೆಂಬುದಕ್ಕೆ ಅವರ ಈ ಕೃತಿಯು ಮಹತ್ವದ ಮಾದರಿಯಾಗಿದೆ.

ಕೆ. ಕೆಂಪೇಗೌಡ, ಜೆ.ಎಸ್. ಕುಳ್ಳಿ, ಎಂ. ಚಿದಾನಂದ ಮೂರ್ತಿ, ಆರ್.ಸಿ. ಹಿರೇಮಠ, ಹಂಪನಾ, ಸಂಗಮೇಶ ಸವದತ್ತಿಮಠ ಮುಂತಾದವರು ಮಾಡಿದ ಸಾಧನೆ, ನೀಡಿದ ಕೊಡುಗೆ ಅನುಪಮವಾಗಿದೆ. ಈ ಹಿರಿಯ ವಿದ್ವನ್ಮಣಿಗಳ ಸಾಲಿನಲ್ಲಿ ಡಾ॥ ವ್ಹಿ.ಜಿ. ಪೂಜಾರರವರು ಗಮನಾರ್ಹರಾಗಿ ಸಾಗಿರುವುದಕ್ಕೆ ಈ ಕೃತಿಯೇ ಪ್ರತೀಕವಾಗಿದೆ. ವಿದ್ವಾಂಸರಲ್ಲಿ ಅಷ್ಟೇ ಅಲ್ಲದೇ ವಿದ್ಯಾರ್ಥಿಗಳಿಗೂ, ಅಧ್ಯಯನಾಸಕ್ತರಿಗೂ, ಅಧ್ಯಾಪನಾಸಕ್ತರಿಗೂ ಮೇಲಾಗಿ ಸಹೃದಯರಿಗೂ ಸ್ಪಂದಿಸುವ ಈ ಕೃತಿಯು ತುಂಬಾ ಉಪಯುಕ್ತವಾಗಿದೆ.

ಇವರ ಮತ್ತೊಂದು ಮಹತ್ವದ ಕೃತಿ "ಕನ್ನಡ ವ್ಯಾಕರಣ ಮತ್ತು ಭಾಷೆ" ಆಗಿದೆ. ವ್ಯಾಕರಣ ಮತ್ತು ಭಾಷಾಶಾಸ್ತ್ರ ಇವೆರಡರ ಬಗೆಗೂ ಗೌರವಾದರಗಳಿವೆ. ಅವರು ಪ್ರಕಟಿಸಿದ ಈ ಕೃತಿಯು ಅತ್ಯಮೂಲ್ಯವಾದ ಕೃತಿಯಾಗಿದೆ. ಇಲ್ಲಿಯ ಶೈಲಿಯು ಸರಳವಾದುದು, ಸ್ಪಷ್ಟವಾದುದು ಅಷ್ಟೇ ಖಚಿತವಾದದ್ದು ಆಗಿದೆ.

ಈ ಕೃತಿಯಲ್ಲಿ ಹಳೆಯ ವ್ಯಾಕರಣವು ಇಂದಿಗೂ ಎಷ್ಟರ ಮಟ್ಟಿಗೆ ಪ್ರಸ್ತುತವೆಂಬುದನ್ನು ಎತ್ತಿ ಹಿಡಿಯುವಲ್ಲಿ ಸಫಲವಾಗಿದೆ. ಆಕಾರವಾಗಿಟ್ಟುಕೊಂಡ ಗ್ರಂಥ "ಕೇಶಿರಾಜನ ಶಬ್ದಮಣಿ ದರ್ಪಣ"ದಿಂದ ಕನ್ನಡ ವ್ಯಾಕರಣ ಪರಂಪರೆಯ ವೈಶಿಷ್ಟ್ಯವನ್ನು ಅವರು ವಿವೇಚಿಸಿದ್ದಾರೆ.

ವ್ಯಾಕರಣ ಮತ್ತು ಭಾಷೆಯ ನಡುವಿನ ಅವಿನಾಭಾವ ಸಂಬಂಧವನ್ನು ಇಲ್ಲಿ ತೌಲನಿಕವಾಗಿ ಚರ್ಚಿಸಿರುವುದು ಈ ಕೃತಿಯ ಧನಾತ್ಮಕ ಅಂಶ. ಕನ್ನಡ ಭಾಷೆಯು ಆಯಾ ಕಾಲಘಟ್ಟಗಳಲ್ಲಿ ಬೆಳವಣಿಗೆ ಹೊಂದಿದ ಸ್ವರೂಪವನ್ನು ಸ್ಪಷ್ಟವಾಗಿ ಕಟ್ಟಿಕೊಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಈ ಕೃತಿಯು ಭಾಷಾವಿಜ್ಞಾನ ಕ್ಷೇತ್ರಕ್ಕೆ ಒಂದು ಒಳ್ಳೆಯ ಕೊಡುಗೆಯಾಗಿದೆ. ಈ ಕೃತಿಯ ಯೋಜನೆ, ವಿನ್ಯಾಸ, ವಿವರಗಳಿಂದ ತುಂಬ ಪ್ರಭಾವ ಬೀರುವುದಲ್ಲದೇ ಅಧ್ಯಯನಶೀಲರಾದ ವಿದ್ಯಾರ್ಥಿಗಳಿಗೆ ಪರಿಚಯಿಸುವ, ಆಸಕ್ತಿ ಮೂಡಿಸುವ ಹೊಸ ವಿಚಾರ-ವಿವರ ನೀಡುವ ಪ್ರಯತ್ನವಾಗಿದೆ. ಈ ಕೃತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುರಸ್ಕಾರ 2009ರಲ್ಲಿ ದೊರಕಿತು.

ಇವರ ಇನ್ನೊಂದು ಮಹತ್ವದ ಕೃತಿ "ಕನ್ನಡ ಭಾಷಾ ವಿವೇಚನೆ" ಇತ್ತೀಚಿಗೆ ಪ್ರಕಟಗೊಂಡಿರುವ ವಿಶಿಷ್ಟ ಕೃತಿಯಾಗಿದೆ. ಇದು ಪ್ರಸ್ತುತ ಕನ್ನಡ ಭಾಷೆಯು ಯಾವ ರೀತಿ ಕಾಲಘಟ್ಟಗಳಿಗೆ ಅನುಗುಣವಾಗಿ ಬದಲಾಗುತ್ತ ಬಂದುದನ್ನು ನಿರೂಪಿಸುವುದರೊಂದಿಗೆ ಅದು ಬೆಳವಣಿಗೆ ಹೊಂದುತ್ತ ಬಂದಿರುವುದನ್ನು ದ್ರಾವಿಡ ಭಾಷೆಗಳಲ್ಲಿ ಅದರ ಸ್ಥಾನವನ್ನೂ ಇಲ್ಲಿ ಗುರುತಿಸಲು ಸಾಧ್ಯವಾಗಿದೆ. ಜಾಗತೀಕರಣದ ಈ ಸಂದರ್ಭದಲ್ಲಿ ಕನ್ನಡ ಭಾಷೆಗೆ ಇರುವ ಸಮಸ್ಯೆ-ಸವಾಲುಗಳನ್ನು ಕುರಿತು ವಿವರಣೆ ನೀಡಲಾಗಿದೆ. "ಭಾಷಾವಿಜ್ಞಾನದ ಮೂಲ ತತ್ವಗಳನ್ನು ವರ್ಣನಾತ್ಮಕ ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ ವಿವೇಚಿಸುವುದರೊಂದಿಗೆ ಕೇಶಿರಾಜನ "ಶಬ್ದಮಣಿ ದರ್ಪಣ"ವನ್ನು ಆಧಾರವಾಗಿಟ್ಟುಕೊಂಡು ವ್ಯಾಕರಣಗಳ ಕೆಲವು ಅಂಶಗಳನ್ನು ವಿಶ್ಲೇಷಣೆ ನಡೆಸಲಾಗಿದೆ. ಭಾಷೆ ಮತ್ತು ವ್ಯಾಕರಣ ಎರಡು ಭಿನ್ನವಾದರೂ ಅವುಗಳ ಸಂಬಂಧ ಅವಿನಾಭಾವಿಯಾದದ್ದು.

ಭಾಷಾವಿಜ್ಞಾನವು ಆ ನಿಯಮ ನಿಬಂಧನೆಗಳನ್ನು ಅನೇಕ ಸಲ ಮೀರಿ ಸಮುದಾಯದಲ್ಲಿನ ಜನತೆಯ ಒಪ್ಪಿಗೆಯನ್ನು ಪಡೆದುಕೊಂಡು ಪರಸ್ಪರರಲ್ಲಿ ಸಂಪರ್ಕವನ್ನು ಸಾಧ್ಯಮಾಡಿಕೊಡುವಲ್ಲಿ ಸಹಜ ಪ್ರಕ್ರಿಯೆಯ ರೂಪದಲ್ಲಿ ಮಹತ್ವ ವಹಿಸುವ ಜ್ಞಾನಶಾಖೆಯಾಗಿದೆ. ಈ ಕೃತಿಯಲ್ಲಿ ಕನ್ನಡ ಭಾಷೆ ಮತ್ತು ಹಳಗನ್ನಡ ವ್ಯಾಕರಣಗಳಂಥ ಶಾಸ್ತ್ರ ವಿಷಯಗಳು ಸುಲಭದಲ್ಲಿ ಸರಳವಾಗಿ ತಿಳಿಯುವಂತೆ ಸಂಕ್ಷಿಪ್ತದಲ್ಲಿ ನಿರೂಪಿಸಲಾಗಿದೆ. ಭಾಷಾ ವೈಜ್ಞಾನಿಕ ಹಾಗೂ ಭಾಷೆಯ ತಾಂತ್ರಿಕ ಪರಿಭಾಷೆಗಳ ವಿವರಣೆಯನ್ನು ನೀಡಲಾಗಿದೆ.

ಈ ಮೇಲಿನ ಎಲ್ಲಾ ಕೃತಿಗಳು ವಿದ್ಯಾರ್ಥಿ ಸಮುದಾಯದಲ್ಲಿ ಹೆಚ್ಚಿನ ಜನಪ್ರಿಯತೆಯನ್ನು ಪಡೆದಿವೆ. ಅಲ್ಲದೇ ಈ ಕೃತಿಗಳು ಅತ್ಯಂತ ಅಮೂಲ್ಯವಾದವು. ಇವರ "ಕನ್ನಡ ಭಾಷಾ ಸಮೀಕ್ಷೆ" ಎಂಬ ಕೃತಿಗೆ 2004ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುರಸ್ಕಾರ ದೊರೆಯಿತು. ಇವರು ಎಂದೂ ಈ ಪುರಸ್ಕಾರ ಮತ್ತು ಪ್ರಶಸ್ತಿಗಳಿಗೆ ಆಸೆಪಟ್ಟವರಲ್ಲ ಇವರ ಪಾಂಡಿತ್ಯ ಪ್ರತಿಭೆಗೆ ತಾನಾಗಿಯೇ ಒದಗಿ ಬಂದವು.

ಹೀಗೆ ಇವರು ಕನ್ನಡ ಭಾಷಾವಿಜ್ಞಾನ ಕ್ಷೇತ್ರಕ್ಕೆ ಗಣನೀಯವಾಗಿ ಕೊಡುಗೆಯನ್ನು ನೀಡಿದ್ದಾರೆ. ಎಲೆಮರೆಯ ಕಾಯಿಯಂತೆ ಸದ್ದುಗದ್ದಲವಿಲ್ಲದೇ ಅಧ್ಯಯನ ಅಧ್ಯಾಪನ ಸಂಶೋಧನೆಗಳಲ್ಲಿ ತೊಡಗಿಕೊಂಡಿರುವವರು. ಭಾಷಾಶಾಸ್ತ್ರ ಕ್ಷೇತ್ರದಲ್ಲಿ ಉಪಯುಕ್ತ ಅಧ್ಯಯನಗಳನ್ನು ನಡೆಸಿರುವ ಶ್ರೀಯುತರ ಪ್ರಯತ್ನ ಅಭಿನಂದನಾರ್ಹ.

**ಅಡಿ ಟಿಪ್ಪಣಿ :**

1. ಡಾ. ವ್ಹಿ.ಜಿ. ಪೂಜಾರರ ಸಮಗ್ರ ಕೃತಿಗಳು ಮತ್ತು ಲೇಖನವನ್ನು ಅನುಲಕ್ಷಿಸಿ.
2. ಡಾ. ವ್ಹಿ.ಜಿ. ಪೂಜಾರರವರ ಸಂದರ್ಶನ.